# ಎಕ್ಸಾಂ ಅಂಬೋದ ಹಬ್ಬ

ಸಿದ್ದನಗೌಡ
ಬಿಜ್ಜೂರ, ಸರೂರ
ಕಲೆ: ಸಂತೋಷ್ ಸಸಿಹಿತ್ಲು



ಎಕ್ಸಾಂ ಬಂತಂತ ಅಂಜಂಗಿಲ್ಲ
ಹಬ್ಬ ಮಾಡೂಣು
ಎಕ್ಸಾಂ ಅಂಬೋದ ಹಬ್ಬ ಅಂತ
ಎಲ್ಲಾರಿಗೂ ಹೇಳೂಣು

ವರಸ ಪೂರ್ತಿ ಕಲತದ್ದಕ್ಕ
ಎಕ್ಸಾಂ ಇರತೈತಿ
ದಿನಾ ಬಿಡದ ಸಾಲಿಗಿ ಹೋಗಿಂದ
ಹೆದರುದೇನೈತಿ?

ಮುಂಜಾನಿಂದ ಸಂಜಿಮಟ
ಸಾಲಿಗಿ ಹೋಗೂಣು
ಟೀಚರ್ ಹೇಳಿದ್ ಪಾಠನೆಲ್ಲ
ಚಂದಂಗ ಕಲಿಯೂಣು

ಅಂದಿನ ಪಾಠ ಅಂದೇ ಓದಿ
ಅಭ್ಯಾಸ ಮಾಡೂಣು
ಬೆಳಗಿನ ಹೊತ್ತು ದೌಡ ಎದ್ದು
ಮತ್ತ ಮತ್ತ ಓದೂಣು

ತಿಳಿಲಾರದ್ದನ್ನ ತಿಳಿಸಾಕಂತ
ಟೀಚರ್ ಇರ್ತಾರು
ಬಿರಿ ಅನಿಸಿದ್ದ ಸರಳ ಮಾಡಿ
ಮತ್ತ ಮತ್ತ ಹೇಳ್ತಾರು

ಇಷ್ಟನ್ನೆಲ್ಲಾ ಮಾಡಿದ ಮ್ಯಾಲೆ
ಇನ್ಯಾಕ ಅಂಜೂಣು
ಹಬ್ಬ ಅನ್ಕೊಂಡ ಎಕ್ಸಾಂ ಬರದು
ಕೇಕೇ ಹೊಡಿಯೂಣು

ದಾರಿ ಬಿಡದ ಸಾಲಿ ಕಲತು
ಶ್ಯಾಣ್ಯಾರ ಆಗೂಣು
ಅವ್ವ ಅಪ್ಪನ ಮೋತಿ ಮ್ಯಾಲೆ
ನಗು ತರೂಣು

## ಕುಂಚ ಪ್ರಪಂಚ



ಆಕಾಶ್ ಎಮ್. ಡೊಳ್ಳಿನ
2ನೇ ತರಗತಿ, ಚೈತನ್ಯ
ಟೆಕ್ನೊ ಶಾಲೆ, ಬೆಂಗಳೂರು





ಜೀವಿಕಾ ಉಪಾಧ್ಯಾಯ
1ನೇ ತರಗತಿ, ಸೋಫಿಯಾ
ಹೈಸ್ಕೂಲ್, ಬೆಂಗಳೂರು